ಹೊರಡಿಸಿಲ್ಲ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯವರು ನಮ್ಮ ಕುಡಿಯುವ ನೀರಿನ ಯೋಜನೆಯನ್ನು ನಾವೇ ಮಾಡಿಕೊಳ್ಳುತ್ತೇವೆ, ನೀವು technical support ಕೊಡಿ ಎಂದು ನಮ್ಮನ್ನು ಕೇಳಿದ್ದಾರೆ. ಅದಕ್ಕಾಗಿ technical support ಕೊಡುವುದಕ್ಕೆ ನಾವು ಒಪ್ಪಿಕೊಂಡಿದ್ದೇವೆ. ಅದಕ್ಕೆ 5% service charge ಎಂದು ಕಟ್ಟಿಸಿಕೊಳ್ಳುತ್ತಿದ್ದೇವೆ. ಉಳಿದಂತೆ ಎಲ್ಲ ಕೆಲಸವನ್ನೂ ತಾವೇ ಮಾಡುತ್ತೇವೆಂದು ಒಪ್ಪಿಕೊಂಡಿದ್ದಾರೆ. ಅದರಂತೆ ಅದು ನಡೆಯುತ್ತಿದೆ. ಇದರಲ್ಲಿ ವ್ಯತ್ಯಾಸವಾಗಬೇಕಾದರೆ ಪುನಃ ಗ್ರಾಮೀಣಾಭಿವೃದ್ಧಿ ಇಲಾಖೆಯವರು ಇದರ ಕುರಿತು ಯೋಚನೆಯನ್ನು ಮಾಡಬೇಕು.

5. ವಿಷಯ :– ಆಲೂಗೆಡ್ಡೆ ಬೆಳೆಗೆ ಅಂಗಮಾರಿ ರೋಗ ಬಂದು ನಷ್ಟವಾಗಿರುವ ಬಗ್ಗೆ.

ಶ್ರೀ ಹೆಚ್.ಡಿ. ರೇವಣ್ಣ (ಹೊಳೆನರಸೀಪುರ) :– ಕಳೆದ ಮೂರು ವರ್ಷಗಳಿಂದ ಅಂದರೆ 2008–09 ರಲ್ಲಿ 77 ಸಾವಿರ ಹೆಕ್ಟೇರ್ ಜಮೀನಿನಲ್ಲಿ ಆಲೂಗೆಡ್ಡೆ ಬೆಳೆಯಲಾಗಿತ್ತು. ಮತ್ತೆ 2009–10ರಲ್ಲಿ ಸುಮಾರು 17 ಸಾವಿರ ಹೆಕ್ಟೇರ್ ಜಮೀನಿನಲ್ಲಿ ಆಲೂಗೆಡ್ಡೆ ಬೆಳೆಯಲಾಗಿತ್ತು. ಕಳೆದ ಮೂರು ವರ್ಷಗಳಿಂದ ಅಂಗಮಾರಿ ರೋಗ ಬಂದು ಸುಮಾರು 250 ಕೋಟಿ ರೂಪಾಯಿಗಳಷ್ಟು ಬೆಳೆ ನಷ್ಟವಾಗಿದೆ. ಕೇವಲ ಕೇಂದ್ರ ಸರ್ಕಾರದಿಂದ 10 ಕೋಟಿ ರೂ. ಬಂದಿದೆ. ಒಂದು ಎಕರೆಗೆ 1 ಸಾವಿರ ರೂ. ನಂತೆ 5 ಲಕ್ಷ ರೂ. ಕೊಡಲಾಗಿದೆ. ಅದೇನೋ ಈಗ ಆಲೂಗೆಡ್ಡೆ ಬೆಳೆ ಬಿಟ್ಟುಬಿಟ್ಟು, ಶುಂಠಿ ಅರಿಶಿನಕ್ಕೆ ಹೋದರು. ಶುಂಠಿ ಅರಿಶಿನ ಕ್ವಿಂಟಾಲ್‌ಗೆ 1300, 1400 ರೂ. ಇದ್ದದ್ದು ಇವತ್ತು ಕ್ವಿಂಟಾಲ್‌ಗೆ 200–300 ರೂ.ಗಳಿಗೂ ಕೊಂಡುಕೊಳ್ಳುವವರು ಇಲ್ಲ. ಅದರಿಂದ ಅದನ್ನು ಬೆಳೆದ ಕೆಲವು ರೈತರು ಬೆಲೆ ಇಲ್ಲದಿರುವುದರಿಂದ ಕೀಳದೆ ಗದ್ದೆಯಲ್ಲಿಯೇ ಬಿಟ್ಟುಬಿಟ್ಟಿದ್ದಾರೆ. ಅದರಿಂದ ಇವತ್ತು ಲಕ್ಷಾಂತರ, ಕೋಟ್ಯಾಂತರ ರೂಪಾಯಿ ನಷ್ಟವಾಗಿದೆ. ನಮ್ಮ ಹಾಸನ ಜಿಲ್ಲೆಯಲ್ಲಿ ಆಲೂಗೆಡ್ಡೆಯೇ ಮುಖ್ಯ ಬೆಳೆ. ಅದು ಬಿಟ್ಟರೆ, ರಾಗಿ, ಜೋಳ ಬೆಳೆಯಲಾಗುತ್ತದೆ. ಸನ್ಮಾನ್ಯ ಮುಖ್ಯಮಂತ್ರಿಯವರಲ್ಲಿ ಮನವಿ ಮಾಡುತ್ತೇನೆ. ಮಾನ್ಯ ತೋಟಗಾರಿಕೆ ಮಂತ್ರಿಯವರು ಸದನದಲ್ಲಿದ್ದಾರೆ. ಮೂರು ವರ್ಷಗಳಲ್ಲಿ ಆಲೂಗೆಡ್ಡೆ ಬೆಳೆ ಬೆಳೆದಿರುವುದರಿಂದ ಸುಮಾರು 250 ಕೋಟಿ ರೂ. ನಷ್ಟವಾಗಿದೆ. ರಾಜ್ಯ ಸರ್ಕಾರದಿಂದ 10 ರೂಪಾಯಿ ಸಹ ಕೊಟ್ಟಿಲ್ಲ.

ಅಧ್ಯಕ್ಷರು :– ತಾವು ಪ್ರಸ್ತಾಪ ಮಾಡಿದ್ದೀರಿ. ಉತ್ತರ ಹೇಳುವುದಕ್ಕೆ ಬಿಡಿ.

ಶ್ರೀ ಹೆಚ್.ಡಿ. ರೇವಣ್ಣ :– ಬಿತ್ತನೆ ಬೀಜದ ಬಗ್ಗೆ ಸಹ ಇವತ್ತು ಸರ್ಕಾರ ನಿಗಾ ವಹಿಸಿಲ್ಲ. ಶುಂಠಿ ಅರಿಶಿನ ಬೆಳೆಯಲ್ಲೂ ನಷ್ಟವಾಗಿದೆ ಈಗಾಗಲೇ ಮಾನ್ಯ ಸದಸ್ಯರು ಹೇಳಿದ್ದಾರೆ.

ಅಧ್ಯಕ್ಷರು : – ತಾವು ಶೂನ್ಯವೇಳೆಯಲ್ಲಿ ಕೇವಲ ಪ್ರಸ್ತಾಪ ಮಾಡಿ.

ಶ್ರೀ ಹೆಚ್.ಡಿ. ರೇವಣ್ಣ :– ಆಲೂಗಡ್ಡೆಗೆ ಸಂಬಂಧಿಸಿದಂತೆ ಯಾರೋ ಮೂರು ಜನ ವರ್ತಕರು ರೈತರಿಂದ ಕ್ವಿಂಟಾಲ್‌ಗೆ 700 ರೂಪಾಯಿಗಳಂತೆ ಆಲೂಗಡ್ಡೆ ತಂದು stock ಮಾಡಿ ಇಟ್ಟುಕೊಂಡು ಅದನ್ನು 1500, 1800 ರೂಪಾಯಿಗಳಿಗೆ ಮಾರುವುದಕ್ಕೆ ಹೊರಟಿದ್ದಾರೆ. ಇದರ ಬಗ್ಗೆ ಸರ್ಕಾರ ಚಿಂತನೆ ಮಾಡಿ, ಬೇರೆ ರಾಜ್ಯದಿಂದ ಉತ್ತಮ ಆಲೂಗಡ್ಡೆ ಬೀಜವನ್ನು ತರಿಸಿ, 50% subsidy ಯನ್ನಾದರೂ, ಕೊಡಬೇಕು. ಸನ್ಮಾನ್ಯ ತೋಟಗಾರಿಕಾ ಸಚಿವರು ಇದರ ಬಗ್ಗೆ ನಿಗಾ ವಹಿಸಬೇಕು ಮತ್ತು ಸಂಬಂಧಪಟ್ಟ ಅಧಿಕಾರಿಗಳ ಕಡೆಯಿಂದ ಮಾಹಿತಿ ತರಿಸಬೇಕು. ಅದಕ್ಕೋಸ್ಕರ, ದಯಮಾಡಿ ತಾವು ಇವತ್ತು ಇದರ ಬಗ್ಗೆ ಗಂಭೀರವಾದ ಚಿಂತನೆ ಮಾಡಬೇಕೆಂದು ಮಾನ್ಯ ತೋಟಗಾರಿಕಾ ಮಂತ್ರಿಯವರಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ವೈ.ಎನ್. ರುದ್ರೇಶ್‌ಗೌಡ :– ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು :– ಇದು ಶೂನ್ಯವೇಳೆಯಲ್ಲಿ ಪ್ರಸ್ತಾಪವಾದ ವಿಷಯ. ಎಲ್ಲದಕ್ಕೂ ಎದ್ದು ನಿಂತು ಮಾತನಾಡಿದರೆ ಹೇಗೆ? No, ಕೊಡುವುದಿಲ್ಲ.

ಶ್ರೀ ವೈ.ಎನ್. ರುದ್ರೇಶ್‌ಗೌಡ :– ಮೊದಲು ಹಾಸನ ಜಿಲ್ಲೆಯಲ್ಲಿ ಒಂದು ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಆಲೂಗೆಡ್ಡೆ ಬೆಳೆ ಬೆಳೆಯುತ್ತಿದ್ದೆವು. ಅದು ಕಡಿಮೆಯಾಗಿ 25 ಸಾವಿರ ಹೆಕ್ಟೇರ್‌ನಲ್ಲೀಗ ಬೆಳೆದಿದ್ದೇವೆ. ಅದನ್ನು ಇಲ್ಲಿ ಪ್ರಶ್ನೆ ಮಾಡಿದರೆ, ಬೇರೆ ಬೆಳೆ ಬೆಳೆಯಿರಿ, ಆಲೂಗೆಡ್ಡೆ ಏಕೆ ಬೆಳೆಯುತ್ತೀರಿ ಎಂದು ಹೇಳಿದರೆ ಹೇಗೆ? ಈ ರೀತಿಯ ಉತ್ತರವನ್ನು ತಾವು ಕಳೆದ ಸಲ ಹೇಳಿದ್ದಿರಿ. ಇದು ಯಾವ ನ್ಯಾಯ? ರೈತರು ಆಲೂಗೆಡ್ಡೆ ಬೆಳೆಯುತ್ತಿದ್ದಾರೆ. ಅದು ಮೂರು ತಿಂಗಳೊಳಗಡೆ ಫಸಲು ಬರುವ ಬೆಳೆ. ಮೂರು ತಿಂಗಳೊಳಗೆ ಬೆಳೆ ಬಂದು ಆ ರೈತ ಅದನ್ನು ಮಾರಾಟ ಮಾಡಿ ಸ್ವಲ್ಪ ಹಣ ಗಳಿಸುತ್ತಿದ್ದ. ಅಂಗಮಾರಿ ರೋಗದಿಂದ ಅದು ಸಂಪೂರ್ಣವಾಗಿ ನಾಶವಾಗುತ್ತಿದೆ. ಮಂತ್ರಿಯವರು ಇದಕ್ಕೆ ಸಮರ್ಪಕವಾದ ಉತ್ತರ ಕೊಡಬೇಕು. ಬೇರೆ ಬೆಳೆ ಬೆಳೆಯಿರಿ ಎಂದು ಹೇಳಬಾರದು. ಆ ರೋಗಕ್ಕೆ ಯಾವ pesticides ಅನ್ನು ಹಾಕಿ ಆ ರೋಗವನ್ನು ಹೇಗೆ ನಿವಾರಿಸುವುದು ಎನ್ನುವ ಕಡೆ ಗಮನಹರಿಸಬೇಕು.

ಶ್ರೀ ಎಸ್.ಎ. ರವೀಂದ್ರನಾಥ್ (ಕೃಷಿ ಸಚಿವರು) :– 2010–11ನೇ ಸಾಲಿನಲ್ಲಿ ತೋಟಗಾರಿಕಾ ಇಲಾಖೆಯು ಪ್ರಾಯೋಗಿಕವಾಗಿ NSC ಮುಖಾಂತರ ನೇರವಾಗಿ ಜಲಂಧರ್‌ನಿಂದ 7032 ಕ್ವಿಂಟಾಲ್ ಬಿತ್ತನೆ ಸಾಮಾಗ್ರಿಯನ್ನು ಖರೀದಿಸಿ, ಶೇ. 25ರ subsidy ದರದಲ್ಲಿ ಸಹಾಯಧನ ಒದಗಿಸಿ ರೈತರಿಗೆ ನೀಡಲಾಗಿತ್ತು. ಆದರೆ, ರೈತರಿಂದ ಉತ್ತಮ ಪ್ರತಿಕ್ರಿಯೆ ಬಾರದ ಕಾರಣದಿಂದ ಸಹಾಯಧನವನ್ನು ಶೇ. 50ಕ್ಕೆ ಹೆಚ್ಚಿಸಲಾಗಿತ್ತು. ಆದಾಗ್ಯೂ 6761 ಕ್ವಿಂಟಾಲ್ ಅನ್ನು ಮಾರಾಟ ಮಾಡಲಾಗಿ ಉಳಿದ 510 ಕ್ವಿಂಟಾಲ್ ಮಾರಾಟವಾಗದೇ ಕೊಳೆತುಹೋಗಿರುತ್ತದೆ. ಸರ್ಕಾರದ ಈ ಪ್ರಯತ್ನವನ್ನು ವಿಫಲಗೊಳಿಸಲು ಮಾರುಕಟ್ಟೆಯ ಮಧ್ಯವರ್ತಿ ಮಾರಾಟಗಾರರು ಆಲೂಗೆಡ್ಡೆ ಬಿತ್ತನೆ ಬೀಜದ ದರವನ್ನು ಕಡಿಮೆ ಮಾಡಿರುವುದರಿಂದ ರೈತರು ದೃಢೀಕೃತವಲ್ಲದ ಬಿತ್ತನೆ ಬೀಜವನ್ನು ಮುಕ್ತ ಮಾರುಕಟ್ಟೆಯಿಂದ ಖರೀದಿಸಿದ್ದು, ಈ ಪ್ರಕ್ರಿಯೆಯಿಂದ ಸರ್ಕಾರಕ್ಕೆ ಸಹ ನಷ್ಟ ಉಂಟಾಗಿದೆ. ಹೀಗಾಗಿ, ಅಲ್ಲಿ ಅಂಗ ಮಾರಿ ರೋಗ ಬಂದದ್ದರಿಂದ ಆಲೂಗೆಡ್ಡೆಯನ್ನು ಬೆಳೆದ ಭೂಮಿಯಲ್ಲಿ ಮೂರು ವರ್ಷಗಳ ಕಾಲ ಬೆಳೆಯಬಾರದೆಂದು ನಮ್ಮ ವಿಜ್ಞಾನಿಗಳು ಸಲಹೆ ಕೊಟ್ಟಿದ್ದಾರೆ. ಅದೆಲ್ಲವನ್ನೂ ಗಮನಿಸಿ, ನಾವು ಮುಂದಿನ ವರ್ಷ ಜಿಲ್ಲಾಧಿಕಾರಿಗಳನ್ನು ಕರೆದು ಯಾವ್ಯಾವ ರೀತಿ ಜಾಗೃತಗೊಳಿಸಬೇಕು, ಬೀಜ ಹಾಕುವುದರಿಂದ ಹಿಡಿದು, ಯಾವ್ಯಾವ ಕೆಲಸ ಮಾಡಬೇಕೆಂಬುದೆಲ್ಲವನ್ನೂ ತಿಳಿಸುತ್ತೇವೆ. ಆದರೂ ಸಹ ರೈತರು ನಮ್ಮ ಹತ್ತಿರ ಬೀಜ ತೆಗೆದುಕೊಳ್ಳದೆ ಹೊರಗಡೆ ಮಾರುಕಟ್ಟೆಯಿಂದ ಬೀಜ ತೆಗೆದುಕೊಳ್ಳುತ್ತಾರೆ. ಮಾರುಕಟ್ಟೆಯಲ್ಲಿ ಬೇಕೆಂದೇ ಸರ್ಕಾರಕ್ಕೆ ತೊಂದರೆ ಮಾಡಬೇಕೆಂದು ಬಹಳ ಕಡಿಮೆ ರೇಟ್‌ಗೆ ಮಾರಾಟ ಮಾಡುತ್ತಾರೆ. ಅದರಿಂದ ರೋಗ ಜಾಸ್ತಿ ಬರುವುದರಿಂದ ಅದಕ್ಕೆ ಏನೇನು ಔಷಧಿಗಳನ್ನು ಕೊಡಬೇಕೆಂದು ಯೋಚಿಸಿ, ಬೇರೆ ಕಡೆಗಿಂತ ಜಾಸ್ತಿ ಔಷಧಿಯನ್ನು ಹಾಸನ ಜಿಲ್ಲೆಗೆ ಕೊಟ್ಟಿದ್ದೇವೆ. ಆದರೂ ಸಹ ಆ ರೀತಿಯ ರೋಗ ಬರುತ್ತಿದೆ. ಆಲೂಗೆಡ್ಡೆಯನ್ನು ಮೂರು ವರ್ಷಗಳು ಬಿಟ್ಟು ನಂತರ ಆ ಭೂಮಿಯಲ್ಲಿ ಬೆಳೆದರೆ ಒಳ್ಳೆ ಬೆಳೆ ಬರುತ್ತದೆ. ಅರಿಶಿನಕ್ಕೆ ಕೇಂದ್ರ ಸರ್ಕಾರ ಕ್ವಿಂಟಾಲ್ ಒಂದಕ್ಕೆ 4092 ರೂಪಾಯಿಗಳಂತೆ ಖರೀದಿಸಬೇಕೆಂದು ತಿಳಿಸಿದೆ. ಆ ರೀತಿ ಈಗಲೂ ಸಹ ನಾವು ಖರೀದಿ ಮಾಡುವ ಪ್ರಯತ್ನ ಮಾಡುತ್ತಿದ್ದೇವೆ.

(ಗೊಂದಲ)

ಅಧ್ಯಕ್ಷರು :– ಇದು ಶೂನ್ಯವೇಳೆ. ತಾವು ಬೇರೆ ರೂಪದಲ್ಲಿ ತನ್ನಿ.

ಶ್ರೀ ಹೆಚ್.ಡಿ ರೇವಣ್ಣ :– ಇದೇ ವಿಷಯದ ಬಗ್ಗೆ ಇವತ್ತು ಮಧ್ಯಾಹ್ನ ನಿಯಮ 371ರಡಿಯಲ್ಲಿ ಚರ್ಚೆಗೆ ಅವಕಾಶ ಕೊಡುತ್ತೀರಾ ?

ಅಧ್ಯಕ್ಷರು : – ಬೇರೆ ರೂಪದಲ್ಲಿ ತನ್ನಿ.

ಶ್ರೀ ಹೆಚ್.ಡಿ ರೇವಣ್ಣ :– ಬೇರೆ ರೂಪದಲ್ಲಿ ತರಬೇಕೆಂದರೆ, ಅಷ್ಟು ಹೊತ್ತಿಗೆ ರೈತರು ಸತ್ತು ಹೋಗಿರುತ್ತಾರೆ. ಏಕೆಂದರೆ, ಇವತ್ತು ಬಿತ್ತನೆ ಬೀಜಕ್ಕೆ 1500 ರೂಪಾಯಿ ಇದೆ. ಅದರ ಬಗ್ಗೆ ಏನಾದರೂ ಪ್ರಸ್ತಾಪವಿದೆಯೇ? 700 ರೂಪಾಯಿಗಳಿಗೆ ತಂದು 1500 ರೂಪಾಯಿಗಳಿಗೆ ಮಾರಾಟ ಮಾಡಿ, ರೈತರನ್ನು ದರೋಡೆ ಮಾಡುತ್ತಿದ್ದಾರೆ. ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತಿದ್ದೀರಿ? ದಯಮಾಡಿ, ಮಂತ್ರಿಯವರು ಹೇಳಬೇಕಾಗುತ್ತದೆ. APMC ಮುಖ್ಯಮಂತ್ರಿಯವರ ಬಳಿಯಲ್ಲಿದೆ. ಅದನ್ನು control ಮಾಡುವುದಕ್ಕೆ ಜಿಲ್ಲಾಧಿಕಾರಿಗಳಿಗೆ ಹೇಳಿ. ಸರ್ಕಾರದಿಂದ subsidy ಯನ್ನಾದರೂ ಕೊಡಬೇಕಾಗುತ್ತದೆ. ಆಲೂಗೆಡ್ಡೆ ಬೆಳೆ ಸಂಪೂರ್ಣ ನಷ್ಟವಾಗುತ್ತಿದೆ.

ಶ್ರೀ ಕೆ. ಎಂ. ಶಿವಲಿಂಗೇಗೌಡ :– ಶುಂಠಿಗೆ ಕ್ವಿಂಟಲ್‌ಗೆ 2500 ರೂ. ಇದ್ದದ್ದು 400 ರೂ. ಗೆ ಬಂದಿದೆ. ಅದರ ಕೂಲಿಗೆ ಖರ್ಚು ಮಾಡಿದ್ದಕ್ಕೂ ಸಾಕಾಗುವುದಿಲ್ಲ. ರೈತರನ್ನು ಯಾರು ಕೇಳುವುದು?

ಶ್ರೀ ಹೆಚ್.ಡಿ ರೇವಣ್ಣ :– ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಮೀಟಿಂಗ್ ಮಾಡುವುದಕ್ಕೆ ಹೇಳಿ, ರೈತರ ಮನೆ ಹಾಳಾಗುತ್ತಿದೆ.

ಅಧ್ಯಕ್ಷರು :– ತೋಟಗಾರಿಕೆ ಸಚಿವರೆ, ಚರ್ಚೆ ಮಾಡಿ.

ಶ್ರೀ ಹೆಚ್.ಡಿ ರೇವಣ್ಣ :– ಜನಪ್ರತಿನಿಧಿಗಳ ಮೀಟಿಂಗ್ ಕರೆದು ಚರ್ಚೆ ಮಾಡಬೇಕು. ಮುಖ್ಯಮಂತ್ರಿಯವರು ಮತ್ತು ತೋಟಗಾರಿಕಾ ಮಂತ್ರಿಯವರು ಸಭೆ ಕರೆಯುವುದಕ್ಕೆ ಹೇಳಿ. ಸುಮ್ಮನೆ ಹಾರಿಕೆ ಉತ್ತರ ಕೊಡುವುದಲ್ಲ.

ಅಧ್ಯಕ್ಷರು :– ತೋಟಗಾರಿಕಾ ಮಂತ್ರಿಯವರು ಹೇಳುತ್ತಿದ್ದಾರಲ್ಲ.

ಶ್ರೀ ಎಸ್.ಎ. ರವೀಂದ್ರನಾಥ್ :– ಅವರು ಏನೇನು ಸಲಹೆ ಕೊಡುತ್ತಾರೆ, ಆ ಸಂಬಂಧ ಅಧಿಕಾರಿಗಳನ್ನು ಕರೆದು ತೀರ್ಮಾನ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು :– ನಿಮ್ಮನ್ನೆಲ್ಲ ಕರೆದು ಸಭೆ ಮಾಡುತ್ತಾರಂತೆ.

ಶ್ರೀ ಹೆಚ್.ಡಿ ರೇವಣ್ಣ :– ಇದಕ್ಕೆ ಮಾನ್ಯ ಮುಖ್ಯಮಂತ್ರಿಯವರು ಉತ್ತರಿಸಬೇಕು. ಮಾನ್ಯ ಮುಖ್ಯಮಂತ್ರಿಯವರೇ, ತಮ್ಮ ಅಧ್ಯಕ್ಷತೆಯಲ್ಲಿ ಒಂದು ಸಭೆ ಕರೆಯಿರಿ.

ಶ್ರೀ ಎಸ್.ಎ. ರವೀಂದ್ರನಾಥ್ :– ಪೂರ್ಣವಾಗಿ ಉತ್ತರ ಕೊಟ್ಟಿದ್ದೇನೆ. ಅಧಿಕಾರಿಗಳ ಸಭೆ ಕರೆದು ಮಾಡುತ್ತೇನೆ.

(ಗೊಂದಲ)

ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು) :– ಇದರ ಗಂಭೀರತೆಯ ಬಗ್ಗೆ ನನಗೆ ಅರಿವಿದೆ. ನಾವು ತಕ್ಷಣ ಇದಕ್ಕೆ ಸಂಬಂಧಪಟ್ಟಂತೆ ಆ ಭಾಗದ ಶಾಸಕರನ್ನು ಮತ್ತು ಅದಕ್ಕೆ ಸಂಬಂಧಪಟ್ಟ ತಜ್ಞರನ್ನು ಕರೆಸಿ ನಮ್ಮ ತೋಟಗಾರಿಕಾ ಸಚಿವರ ನೇತೃತ್ವದಲ್ಲಿ ತಕ್ಷಣ ಸಭೆ ಕರೆದು ಅದಕ್ಕೆ ಏನು ಪರಿಹಾರ ಕಂಡುಕೊಳ್ಳಬೇಕೋ, ಏನು ಮುಂದಿನ ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುವ ಕೆಲಸ ಕಾರ್ಯವನ್ನು ಸರ್ಕಾರ ಮಾಡುತ್ತದೆ. ತಕ್ಷಣ ದಿನಾಂಕ ಮತ್ತು ಸಮಯವನ್ನು ನಿಗದಿ ಮಾಡುತ್ತೇವೆ.

ಶ್ರೀ ಹೆಚ್.ಡಿ ರೇವಣ್ಣ :– APMC ನಿಮ್ಮ control ನಲ್ಲಿದೆ. 700 ರೂ.ಗೆ ತಂದು 1500 ರೂ. ಗಳಿಗೆ ಮಾರುತ್ತಿದ್ದಾರೆ. ನಿಮ್ಮ ಅಧ್ಯಕ್ಷತೆಯಲ್ಲಿ ಒಂದು ಮೀಟಿಂಗ್ ಕರೆಯಿರಿ.

ಶ್ರೀ ಡಿ.ವಿ. ಸದಾನಂದಗೌಡ :– ಇದಕ್ಕೆ ನಾವು ನೀವು ಕುಳಿತುಕೊಂಡು ಚರ್ಚೆ ಮಾಡಿ ಯಾವ ತೀರ್ಮಾನಕ್ಕೆ ಬರಬೇಕೋ ಬರೋಣ. ಖಂಡಿತ, ಸರ್ಕಾರ ಬದ್ಧವಾಗಿದೆ.

ಶ್ರೀ ಹೆಚ್.ಡಿ ರೇವಣ್ಣ :– ಸದನ ಮುಗಿಯುವುದರೊಳಗೆ ಮಾಡಿ.

ಶ್ರೀ ಡಿ.ವಿ. ಸದಾನಂದಗೌಡ :– ಮಾಡುತ್ತೇವೆ.

6. ವಿಷಯ : ಕಾಲೇಜುಗಳಿಗೆ ಕಟ್ಟಡಗಳನ್ನು ಮಂಜೂರು ಮಾಡುವ ಬಗ್ಗೆ

ಶ್ರೀ ಹೆಚ್.ಕೆ. ಕುಮಾರಸ್ವಾಮಿ (ಸಕಲೇಶಪುರ) :– ಮಾನ್ಯ ಸಭಾಧ್ಯಕ್ಷರೆ, ಈ Appendix-E ನಲ್ಲಿ ಕಟ್ಟಡಗಳನ್ನು ಕೊಡುವುದರ ಬಗ್ಗೆ, ಕಟ್ಟಡಗಳನ್ನು ಮಂಜೂರು ಮಾಡುವುದರ ಬಗ್ಗೆ, ಪ್ರಥಮ ದರ್ಜೆ ಕಾಲೇಜುಗಳಿರಬಹುದು, ಕಿರಿಯ ಕಾಲೇಜುಗಳಿರಬಹುದು, ಮಂಜೂರಾತಿಯ ಬಗ್ಗೆ ಮಾನ್ಯ ಸಚಿವರ ಗಮನ ಸೆಳೆಯುತ್ತಿದ್ದೇನೆ.

ಶ್ರೀ ಹೆಚ್.ಡಿ ರೇವಣ್ಣ (ಹೊಳೆನರಸಿಪುರ) :– ನಾನು ಈ ವಿಚಾರ ಬೆಳಿಗ್ಗೆ BAC ಯಲ್ಲಿ ಹೇಳಿದೆವು. ಪುನಃ ತಮ್ಮ ಗಮನಕ್ಕೆ ತರುತ್ತಿದ್ದೇವೆ. ಏಕೆಂದರೆ, ನಾನು ಮತ್ತು ಶಿವಲಿಂಗೇಗೌಡರವರು ಕೂಡ ಇದಕ್ಕೆ signature ಹಾಕಿದ್ದೇವೆ. 2008–2009 ಮತ್ತು 2009–2010 ನೇ ಸಾಲಿನಲ್ಲಿ Appendix-E ನಲ್ಲಿತ್ತು. 2011–12 ಆದರೂ ಇವತ್ತಿನವರೆಗೆ tender ಕರೆಯುವುದಕ್ಕೆ ಆಗಿಲ್ಲ. ದಯಮಾಡಿ ಅವಶ್ಯಕತೆ ಇರುವುದನ್ನು ಕರೆಯಿರಿ ಅವಶ್ಯಕತೆ ಇಲ್ಲದೇ ಇರುವುದನ್ನು ಮಾಡಿ ಎಂದು ನಾವು ನಿಮ್ಮನ್ನು ಕೇಳುವುದಿಲ್ಲ. ಕೆಲವು ಕಡೆ tender ಕರೆದಿದ್ದಾರೆ, ಕೆಲವು ಕಡೆ tender ಇಲ್ಲ. 2008–09, 2009–10,